5)	ಸಿವಿಲ್ ಬಂಧಿಗಳು	2	
6)	ನಾರ್ಕೊಟಿಕ್ ಡ್ರಗ್ಸ್ ಮತ್ತು ಸೈಕೋ ಟ್ರೋಪಿಕ್ ಸಬ್ಸ್ ಟ್ರಾನ್ಸ್ ಆರ್ಡಿನೆನ್ಸ್ ಕಾಯ್ದೆಯ ಬಂಧಿಗಳು	5	
7)	ಭಯೋತ್ಪಾದಕ ಮತ್ತು ವಿಧ್ವಂಸಕ ಕೃತ್ಯಗಳನ್ನು ತಡೆಹಿಡಿಯುವ ಶಾಸನದಡಿಯಲ್ಲಿ ಬಂಧಿಗಳು (ಟಾ.ಡಾ.ಕಾಯ್ದೆಯಡಿಯಲ್ಲಿ)	117	11
	ಒಟ್ಟು	6400	164

ಆ)1)ಬಂಧಿಗಳ ಇಚ್ಛೆಗನುಗುಣವಾಗಿ ವಿವಿಧ ವೃತ್ತಗಳಲ್ಲಿ ವೃತ್ತಿ ಶಿಕ್ಷಣ ತರಬೇತಿ.

2) ಆಧುನಿಕ ರೀತಿಯಲ್ಲಿ ಕೃಷಿ ಮತ್ತು ತೋಟಗಾರಿಕೆ ತರಬೇತಿ.

3) ಮಜೂರಿ ಗಳಿಕೆ ಯೋಜನೆ

4) ಶಿಕ್ಷಣ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು

5) ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು

6) ಸಂದರ್ಶನ, ಪತ್ರ ವ್ಯವಹಾರ ಹಾಗೂ ಮಾಫಿ ಪದ್ಧತಿ

7) ಉಪಹಾರ ಗೃಹದ ಅನುಕೂಲತೆ

8) ಪಂಚಾಯಿತಿ ಪದ್ಧತಿ

9) ಪೇರೋಲ್ ಫರ್ಲೋ ತಾತ್ಕಾಲಿಕ ಬಿಡುಗಡೆ

10) ವಿವಶ್ಯನ ಧ್ಯಾನ ಶಿಬಿರಗಳು ಹಾಗೂ ಪ್ರಾರ್ಥನೆಗಳು

ಇ) ಶ್ರೀಮತಿ ಕಿರಣ್ ಬೇಡಿ ಇವರ ಸಲಹೆಯನ್ನು ಪಡೆಯುವ ಉದ್ದೇಶ ಸರ್ಕಾರಕ್ಕೆ ಇದೆ.

ಈ) ಪರಿಶೀಲನೆಯಲ್ಲಿದೆ.

ನಗರದ ಸ್ಯಾಂಕಿ ಕೆರೆಯಲ್ಲಿ ಮಕ್ಕಳ ಚಲನಚಿತ್ರ ಸಂಕೀರ್ಣ ಕಟ್ಟುವುದು

241-ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಉತ್ತರಭಾಗದಲ್ಲಿರುವ ಸ್ಯಾಂಕಿ ಕೆರೆಯಲ್ಲಿ ಸುಮಾರು 4.30 ಎಕರೆ ಜಮೀನನ್ನು ಮಕ್ಕಳ ಚಲನಚಿತ್ರ ಸಂಕೀರ್ಣ ಹಾಗೂ ಫಿಲಂ ಲ್ಯಾಬರೇಟರಿಯನ್ನು ನಿರ್ಮಿಸಲು ಗುತ್ತಿಗೆ ಆಧಾರದ ಮೇಲೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಮಹಾನಗರ ಪಾಲಿಕೆ ಸಂಕೀರ್ಣ ನಿರ್ಮಿತ ಜಾಗದ ಗುತ್ತಿಗೆಯನ್ನು ರದ್ದುಗೊಳಿಸುವ ನಿರ್ಧಾರ ಕೈಗೊಂಡಿರುವುದು ನಿಜವೇ?

ಇ) ಸಂಕೀರ್ಣ ನಿರ್ಮಾಣ ಮಾಡಬೇಕಾದ ಜಾಗದಲ್ಲಿ ಸುಮಾರು 200ಕ್ಕೂ ಹೆಚ್ಚು ಚೆನ್ನಾಗಿ ಬೆಳೆದ ವೃಕ್ಷಗಳಿದ್ದು ಪರಿಸರ ಪ್ರೇಮಿಗಳು ಈ ಸಂಕೀರ್ಣದ ವಿರುದ್ಧ ಆತಂಕ ವ್ಯಕ್ತಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಾದರೆ ಬೆಂಗಳೂರಿನ ಕೆರೆಗಳ ಪೈಕಿ ಒಂದಾದ ಸ್ಯಾಂಕಿ ಕೆರೆಯ ನಾಶ ತಡೆಯಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಹೌದು

ಆ) ಹೌದು

ಇ) ಹೌದು

ಈ) ನಗರಪಾಲಿಕೆಯು ದಿನಾಂಕ 26-8-94ರ ನಡವಳಿಕೆಗಳ ವಿಷಯ ಸಂಖ್ಯೆ 15(331) ರೀತಿ ಗುತ್ತಿಗೆಯನ್ನು ರದ್ದುಪಡಿಸಲು ನಿರ್ಣಯಿಸಿದ್ದು, ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ನಗರದಲ್ಲಿ ಸಾರಿಗೆ ಸಂಚಾರದ ಒತ್ತಡ

248 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದಲ್ಲಿರುವ ದ್ವಿಚಕ್ರ ವಾಹನಗಳ ಸಂಖ್ಯೆ ಎಷ್ಟು? ಬೆಂಗಳೂರು ನಗರದ ವಾಹನ ಸಂಚಾರದ ಒತ್ತಡ ತಗ್ಗಿಸಲು ಏಕಮುಖ ಸಂಚಾರದ ವ್ಯವಸ್ಥೆಯ ಜೊತೆಗೆ ಸರ್ಕಾರದವರು ಹಮ್ಮಿಕೊಂಡಿರುವ ಕ್ರಮಗಳೇನು?

ಆ) ನಗರದಲ್ಲಿ ವಾಹನ ಸಂಚಾರದ ಒತ್ತಡ ತೀವ್ರವಾಗಿರುವ ಬೆಳಿಗ್ಗೆ 8-00 ರಿಂದ 10-00 ಗಂಟೆವರೆಗೆ ಹಾಗೂ ಸಂಜೆ 5-00 ರಿಂದ 6-00 ರವರೆಗೆ ಈ ಸಮಯವನ್ನು ಗಮನಕ್ಕೆ ತೆಗೆದುಕೊಂಡು ಈ ಒತ್ತಡ ತಗ್ಗಿಸಲು ನಗರದ ವಿವಿಧ ಸಂಸ್ಥೆಗಳ, ಇಲಾಖೆಗಳ, ಶಾಲೆಗಳ ಉದ್ದಿಮೆಗಳ ಕೆಲಸದ ವೇಳೆಯನ್ನು ಸೂಕ್ತ ಬದಲಾವಣೆಗೆ ಒಳಪಡಿಸಿ ಬೆಳಿಗ್ಗೆಯಿಂದ ಸಂಜೆಯವರೆಗೆ ಬೇರೆ ಬೇರೆ ಅವಧಿಗೆ ಕೆಲಸದ ವೇಳೆಯನ್ನು ನಿಗಧಿಗೊಳಿಸುವ ಬಗ್ಗೆ ಸರ್ಕಾರದವರು ಪರಿಶೀಲಿಸುವರೇ?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಬೆಂಗಳೂರು ನಗರದಲ್ಲಿ ದಿನಾಂಕ : 31-3-1995ರವರೆಗೆ 5,83,089 ದ್ವಿಚಕ್ರ ವಾಹನಗಳು ಸಂಚರಿಸುತ್ತಿರುತ್ತವೆ.

ನಗರದ ವಾಹನ ಸಂಚಾರದ ಒತ್ತಡ ತಗ್ಗಿಸಲು ಏಕಮುಖ ಸಂಚಾರದ ಜೊತೆಗೆ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಹಮ್ಮಿಕೊಂಡಿದೆ.

1. ಮೇಲ್ಸಾವಣಿ ಸೇತುವೆಗಳು ಮತ್ತು ಸಬ್‌ವೇಗಳ ನಿರ್ಮಾಣ.
2. ಬಹುಮಹಡಿಕಟ್ಟಡಗಳಲ್ಲಿ ವಾಹನ ನಿಲುಗಡೆ ಸ್ಥಳಗಳ ನಿರ್ಮಾಣ.
3. ವಾಹನ ನಿಲುಗಡೆ ನಿಷಿದ್ಧ ಸ್ಥಳಗಳಲ್ಲಿ ನಿಲ್ಲಿಸಿದ ಮತ್ತು ಅಪಘಾತಕ್ಕೀಡಾದ ವಾಹನಗಳನ್ನು ತೆಗೆಯಲು ಎಳೆತರುವ ವಾಹನ (ರೆಕ್ಕರ್)ಗಳನ್ನು ಉಪಯೋಗಿಸುವುದು.
4. ಸರ್ಕಾರಿ ಕಛೇರಿಗಳು, ಶಾಲೆಗಳು ಹಾಗೂ ಉದ್ದಿಮೆಗಳು ಹಾಗೂ ನಗರ ವಿವಿಧ ಸಂಸ್ಥೆಗಳ ಕೆಲಸದ ವೇಳೆಯನ್ನು ಬದಲಾಯಿಸಿ ಕೆಲಸದ ವೇಳೆಯನ್ನು ನಿಗಧಿಪಡಿಸುವುದು.
5. ವಾರದ ರಜೆಗಳನ್ನು ಸರ್ಕಾರಿ ಕಛೇರಿಗಳಿಗೆ ಶಾಲೆಗಳಿಗೆ ವಿವಿಧ ಸಂಸ್ಥೆ ಉದ್ದಿಮೆ ಹಾಗೂ ಕಛೇರಿಗಳಿಗೆ ಬೇರೆ ಬೇರೆ ದಿವಸ ನಿಗಧಿಪಡಿಸುವುದು.
6. ನಗರದೊಳಗೆ ಇರುವ ಲಾರಿ ಬುಕಿಂಗ್ ಆಫೀಸ್‌ಗಳನ್ನು ತೆರವು ಮಾಡಲು ಉದ್ದೇಶಿಸಲಾಗಿದೆ.
7. ನಗರದೊಳಗೆ ಇರುವ ಲಾರಿ ಬುಕಿಂಗ್ ಆಫೀಸ್‌ಗಳನ್ನು ತೆರವು ಮಾಡಲು ಉದ್ದೇಶಿಸಲಾಗಿದೆ.